ತಮಿಳಿನಿಂದ ಕನ್ನಡಕ್ಕೆ ಹಾಗೂ ಕನ್ನಡದಿಂದ ತಮಿಳಿಗೆ ಅನೇಕ ಕಥೆ, ಕವನಗಳನ್ನು ಅನುವಾದಿಸುತ್ತ ಬಂದಿರುವ ಕೆ. ನಲ್ಲತಂಬಿ ಮೈಸೂರಿನವರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲಸಿದ್ದಾರೆ. ಪಿ. ಲಂಕೇಶ್‌ರ 'ನೀಲು' ಕವಿತೆಗಳನ್ನು 'ಮೊಟ್ಟುವಿರಿಯುಮ್ ಸತ್ತಮ್' ಎಂಬ ಹೆಸರಿನಲ್ಲಿ ತಮಿಳು ಭಾಷೆಗೆ ಅನುವಾದಿಸಿದ್ದಾರೆ. ಛಾಯಾಗ್ರಹಣದಲ್ಲಿ ಹೆಚ್ಚಿನ ಆಸಕ್ತಿ. ಪೆರುಮಾಳ್ ಮುರುಗನ್, ಸುಂದರ ರಾಮಸ್ವಾಮಿ ಅವರ ಕಾದಂಬರಿಗಳನ್ನು ಕನ್ನಡಕ್ಕೆ ತಂದಿದ್ದಾರೆ.

ಅವರ ದಿನನಿತ್ಯದ ಬದುಕಿನ ಪದ್ಧತಿಗಳ ಬಗ್ಗೆಯೂ ಇರುವ ಅಪಪ್ರಚಾರಗಳಿಗೆ ಬದಲಾಗಿ ಇಮ್ಮೈಯಂ ಅವರ ಕೃತಿಗಳು ಸತ್ಯವನ್ನು ಅತಿರೇಕಕ್ಕೆ ಕೊಂಡೊಯ್ಯದೆ ಸಹಜವಾಗಿ ಓದುಗರ ಮುಂದಿಡುತ್ತವೆ.

ಮನುಷ್ಯ ಸಂಬಂಧಗಳನ್ನು ಕೇಂದ್ರವಾಗಿಸಿಕೊಂಡೇ ಸಾಹಿತ್ಯ ಮಾತನಾಡಬೇಕೆಂಬುದು ಇಮ್ಮೈಯಂ ಅವರ ಅಭಿಪ್ರಾಯ. ಅವರ ಸಣ್ಣಕಥೆಗಳಲ್ಲಿ ಇವನ್ನು ಹೆಚ್ಚಾಗಿ ಕಾಣಬಹುದು. ಅವರ ಸಣ್ಣಕಥೆಗಳು ಯಾವ ಬಾಹ್ಯಾಲಂಕಾರಗಳೂ ಇಲ್ಲದೆ, ನವ್ಯ ಸಾಹಿತ್ಯದ ಕ್ಲಿಷ್ಟವಾದ ಯಾವ ತಂತ್ರಗಳನ್ನೂ ಬಳಸದೆ, ಸಹಜವಾದ ನಿಜ ಬದುಕನ್ನು ದೃಶ್ಯವಾಗಿಸುವುದರಲ್ಲಿ ಗಮನಸೆಳೆಯುತ್ತವೆ.

'ದಲಿತ ಬದುಕೂ, ದಲಿತ ಸಾಹಿತ್ಯವೂ ನವ್ಯ, ಅಸ್ತಿತ್ವವಾದ, ರಚನಾತ್ಮಕತೆ, ಆಧುನಿಕೋತ್ತರವಾದ ಮುಂತಾದ ಸಿದ್ಧಾಂತಗಳೋ, ತತ್ವಗಳೋ ಅಲ್ಲ; ದಲಿತ ಸಾಹಿತ್ಯ ಎಂಬುದು ಒಬ್ಬ ಮನುಷ್ಯನ, ಒಂದು ಕುಟುಂಬದ ಜೀವನವಲ್ಲ. ಕಥೆ ಅಲ್ಲ. ಒಂದು ದೊಡ್ಡ ಜನಾಂಗದ ಸಂಸ್ಕೃತಿ, ಶಿಸ್ತು, ಪದ್ಧತಿ, ಇತಿಹಾಸ, ಭಾಷೆ, ಸಂಕೇತ, ಗುರುತು' ಎಂದು ದಲಿತ ಸಾಹಿತ್ಯದ ಬಗ್ಗೆ ಇಮ್ಮೈಯಂ ಹೇಳಿದ್ದಾರೆ.

ತನ್ನ ಕೃತಿಗಳ ಬಗ್ಗೆ ಇಮ್ಮೈಯಂ, 'ನನ್ನ ಬದುಕೇ ನನ್ನ ಬರವಣಿಗೆ. ನಾನು ಹುಟ್ಟಿ, ಬೆಳೆದ ಊರು, ಆ ಊರಿಗೆ ಸೇರಿದ ಜನರು, ಅವರ ಜೀವನ ಪದ್ಧತಿ, ಆ ಊರಿಗೆ ಇರುವ ಕಾನೂನು, ಶಿಸ್ತಿನ ಕ್ರಮಗಳು, ಧರ್ಮ, ನೀತಿ ನಿಯಮಗಳು, ನಂಬಿಕೆಗಳು, ಆಚಾರ ವಿಚಾರಗಳು ಇವೇ ನನ್ನ ಸೃಷ್ಟಿಯ ಲೋಕ. ಆ ಲೋಕದಿಂದಲೇ ಆರೋಗ್ಯ, ಧನಭಾಗ್ಯಂ, ಸೆಡಲ್ ಮುಂತಾದ ಪಾತ್ರಗಳು ಹುಟ್ಟಿಕೊಂಡಿವೆ. ನನ್ನ ಮೆದುಳಿನಿಂದ ರೂಪುಗೊಂಡವರು ಎಂದು ಯಾರೂ ಇಲ್ಲ. ಸಾಹಿತ್ಯ ಬದುಕಿನಿಂದ ದೂರ ಅಗಲಿರುವುದೋ, ಅನ್ಯವಾಗಿರುವುದೋ ಅಲ್ಲ' ಎಂದು ಹೇಳಿದ್ದಾರೆ. ಈ ಮಾತುಗಳು, ಅವರ ಬರವಣಿಗೆ ಹಾಗೂ ಬದುಕು ಎರಡರ ವಿಸ್ತಾರವನ್ನೂ ಸೂಚಿಸುವಂತಿವೆ.

'ಒಂದು ಜನಾಂಗದ ಗುರುತು ಆ ಸಮುದಾಯದ ಸಂಸ್ಕೃತಿ. ದಲಿತ ಲೇಖಕರ ಪ್ರಮುಖ ಉದ್ದೇಶ, ದಲಿತ ಸಂಸ್ಕೃತಿಯನ್ನು ಮರಳಿ ಪಡೆದು ಸೃಷ್ಟಿಸುವುದು. ಅದರ ಹಿರಿಮೆಗರಿಮೆಗಳನ್ನು ಸಂಪೂರ್ಣವಾಗಿ ಅರಿತುಕೊಂಡು, ಅದನ್ನು ಸಾಹಿತ್ಯ ಸೃಷ್ಟಿಯ ಮೂಲಕ ಮುಂದಿನ ಕಾಲಘಟ್ಟಕ್ಕೆ ಸಾಗಿಸಬೇಕಾಗಿರುವುದು. ಇದು ಸಾಧ್ಯವಾಗದೆ ಹೋದರೆ, ಅಂತರರಾಷ್ಟ್ರೀಯ ಮಟ್ಟದಲ್ಲಲ್ಲ, ಭಾರತೀಯ–ತಮಿಳು ಸಂದರ್ಭದಲ್ಲೂ ದಲಿತ ಸಾಹಿತ್ಯ ರೂಪುಗೊಳ್ಳುತ್ತದೆಯೇ ಎಂಬುದು ಪ್ರಶ್ನಾರ್ಥಕವೇ' ಎನ್ನುತ್ತಾರೆ ಇಮ್ಮೈಯಂ.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವು ಗೌರವ–ಪುರಸ್ಕಾರಗಳು ಇಮ್ಮೈಯಂ ಅವರಿಗೆ ಸಂದಿವೆ. ಆ ಸಾಲಿಗೀಗ 2022ರ ಸಾಲಿನ 'ಕುವೆಂಪು ರಾಷ್ಟ್ರಪ್ರಶಸ್ತಿ' ಸೇರಿಕೊಂಡಿದೆ. ದಲಿತರ ಬದುಕಿನ ನೋವು ನಲಿವುಗಳನ್ನು ಸಾಮಾನ್ಯ ಜನ ಅರಿತುಕೊಳ್ಳುವಂತೆ ತಮ್ಮ ಕಥೆ–ಕಾದಂಬರಿಗಳಲ್ಲಿ ಬರೆದಿರುವ ಸಂವೇದನಾಶೀಲ ಬರಹಗಾರನಿಗೆ, ಭಾರತೀಯ ಭಾಷೆ ಮತ್ತು ಸಾಹಿತ್ಯಕ್ಕೆ ಮಹೋನ್ನತ ಕೊಡುಗೆ ನೀಡಿರುವ ಕನ್ನಡದ ಕುವೆಂಪು ಅವರ ಹೆಸರಿನಲ್ಲಿ ದೊರೆತಿರುವ ಪ್ರಶಸ್ತಿ (ಕನ್ನಡೇತರ ಭಾರತೀಯ ಲೇಖಕರಿಗೆ 'ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳ್ಳಿ' ನೀಡುವ 'ಕುವೆಂಪು ರಾಷ್ಟ್ರ ಪ್ರಶಸ್ತಿ') ದೊರೆತಿರುವುದು ಎರಡು ಸೋದರ ಸಂಸ್ಕೃತಿಗಳ ನಡುವಣ ಅಪೂರ್ವ ಅನುಸಂಧಾನದಂತೆ ಕಾಣಿಸುತ್ತದೆ. ಇಮ್ಮೈಯಂ ಅವರಿಗೆ ಸಂದಿರುವ 'ಕುವೆಂಪು ಪ್ರಶಸ್ತಿ' ತಮಿಳರಿಗೆ ಬಹಳ ಹೆಮ್ಮೆಯ ಸಂಗತಿ. ಒಬ್ಬ ತಮಿಳು ಲೇಖಕನನ್ನು ಕನ್ನಡ ಮಣ್ಣಿನಲ್ಲಿ ಗೌರವಿಸುವುದು ಎರಡೂ ರಾಜ್ಯಗಳ ಸೌಹಾರ್ದ ಸಂಬಂಧಕ್ಕೆ ಇನ್ನೊಂದು ದೀಪವನ್ನು ಬೆಳಗಿಸಿದಂತೆ. ●